Ph : 080 28015401

**Office of the Chief Engineer**
**Panchayath Raj Engineering Department**
Graminabhivruddhi Bhavan
Anandrao Circle, Bangalore - 560 009.

**ಮುಖ್ಯ ಇಂಜಿನಿಯರ್‌ರವರ ಕಛೇರಿ**
**ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ**
**ಗ್ರಾಮೀಣಾಭಿವೃದ್ಧಿ ಭವನ, ಆನಂದ್ ರಾವ್ ವೃತ್ತ,**
**ಬೆಂಗಳೂರು - 560 009.**

**Fax No. : Accounts : 080 28015413 EST : 080 28015414 Tech : 080 28015415**

ಇ-ಮೇಲ್ : cepred09@gmail.com

**ಸಂಖ್ಯೆ:CE/PRED/EE-1/TA- 3 /AE-6 /2015-16/ dated:11.2.2016**

**3ನೇ ಸಂಸ್ಥೆ ತಪಾಸಣೆಗಾಗಿ ಸಮಾಲೋಚಕರ ಹೆಸರು ಸೇರ್ಪಡೆಗೆ**
**ಆಸಕ್ತಿ ವ್ಯಕ್ತಪಡಿಸುವಿಕೆಗೆ ಆಹ್ವಾನ**

ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ, ಇವರು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಯಡಿಯಲ್ಲಿ ಪ್ರಮುಖವಾಗಿ ಲೆಕ್ಕ ಶೀರ್ಷಿಕೆ – 3054/4702/2702/ನಬಾರ್ಡ್ ಮತ್ತು ಠೇವಣಿ ವಂತಿಗೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದ್ದು ಸಾಕಷ್ಟು ಸಂಖ್ಯೆ ಕಾಮಗಾರಿಯ ಅಂದಾಜು ಮೊತ್ತವು ರೂ.5.00ಲಕ್ಷಕ್ಕೆ ಸೀಮಿತವಾಗಿದ್ದು ಹಾಗೂ ಎಲ್ಲಾ ಕಾಮಗಾರಿಗಳು ಗ್ರಾಮೀಣ ಭಾಗದಲ್ಲಿರುವುದರಿಂದ ಅವುಗಳ ಅನುಷ್ಠಾನ ಪದ್ಧತಿ ಮತ್ತು ನಿಗಧಿತ ಗುಣಮಟ್ಟ ತಪಾಸಣಾ ಕಾರ್ಯಕ್ಕೆ ಜಿಲ್ಲಾವಾರು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಯ ಅನುಕೂಲಕ್ಕೆ ತಕ್ಕಂತೆ ಮೂರನೇ ತಂಡದ ಸಮಾಲೋಚಕರ ಆಯ್ಕೆಯ ಅವಶ್ಯಕತೆಯಿರುತ್ತದೆ.

ಮೂರನೇ ತಂಡದ ತಪಾಸಣೆಗಾಗಿ ಸಮಾಲೋಚಕರು ತಮ್ಮ ಸಂಸ್ಥೆಯ ಕುರಿತು ಈ ಕೆಳಕಂಡ ದೃಢೀಕೃತ ಪತ್ರಗಳನ್ನು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಗೆ ದಿನಾಂಕ 29.2.2016 ಕ್ಕಿಂತ ಮುಂಚಿತವಾಗಿ ರೂ.2,000/- ಗಳ ಶುಲ್ಕಗಳೊಂದಿಗೆ ಸಲ್ಲಿಸುವಂತೆ ಆಸಕ್ತಿಯುಳ್ಳ ಸಮಾಲೋಚಕರ ಸಂಸ್ಥೆಯವರನ್ನು ಈ ಮೂಲಕ ಆಹ್ವಾನಿಸಲಾಗಿದೆ.

ಸಂಸ್ಥೆಯ ವಿವರ

1) ಸಂಸ್ಥೆಯ ಹೆಸರು ಮತ್ತು ವಿಳಾಸ :
2) ಸ್ಥಾಪನೆಯ ದಿನಾಂಕ :
3) ಪ್ರಸ್ತಾಪಿತ ವ್ಯಕ್ತಿಯ ವಿವರ : (ಹೆಸರು, ವಿದ್ಯಾರ್ಹತೆ, ಅನುಭವ, ಪ್ರಮುಖ ವಿಷಯದಲ್ಲಿ ಪರಿಣಿತಿ)
4) ಸಿಬ್ಬಂದಿಯ ವಿವರ : (ಡಿಪ್ಲೋಮಾ (ಸಿವಿಲ್), ಬಿ.ಇ (ಸಿವಿಲ್), ಸಹಾಯಕ ಸಿಬ್ಬಂದಿ ಇತ್ಯಾದಿ)
5) ಕಾನೂನುಬದ್ಧ ದಾಖಲೆಗಳು, **I.T. Returns Turn Over, Registration (if any)**
6) ಕಾರ್ಯಾನುಭವದ ಪ್ರಮಾಣ ಪತ್ರ
7) ಲಭ್ಯವಿರುವ ಯಂತ್ರೋಪಕರಣಗಳು.

ಸಂಸ್ಥೆಯ ಪರಿಣಿತಿ ವಿವರಗಳು ಕೆಳಕಂಡಂತಿರಬೇಕು.

- ಮೂರನೇ ಸಮಾಲೋಚನ ಸಂಸ್ಥೆಯು ಕಡ್ಡಾಯವಾಗಿ ನೋಂದಾಯಿತ ಸಂಸ್ಥೆಯಾಗಿರಬೇಕು.
- ಯಾವುದೇ ನೋಂದಾಯಿತ ಕಾಲೇಜು / ನೋಂದಾಯಿತ ಸಂಸ್ಥೆ ಎಂಪ್ಯಾನಲ್ಡ್ ಲಿಸ್ಟ್‌ಗೆ ಸೇರ್ಪಡೆಗಾಗಿ ಅರ್ಜಿ ನೀಡಲು ಅರ್ಹರಿರುತ್ತಾರೆ.
- ಮೂರನೇ ಸಂಸ್ಥೆಗೆ ಸಮಾಲೋಚಕರಾಗಿ ಕನಿಷ್ಠ ಮೂರು ವರ್ಷಗಳು ಕಾರ್ಯ ನಿರ್ವಹಿಸಿರುವ ಅನುಭವವಿರತಕ್ಕದ್ದು.
- ಸಂಸ್ಥೆಯು ಸಿವಿಲ್ ಕಾಮಗಾರಿಗಳ ಪರೀಕ್ಷಾ ಪ್ರಯೋಗಾಲಯವನ್ನು ನಿಯೋಜಿತ ಜಿಲ್ಲೆಯಲ್ಲಿ ಉಪ ಪ್ರಯೋಗಾಲಯವನ್ನು ಹೊಂದಿರತಕ್ಕದ್ದು ಹಾಗೂ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಬೇಕಾಗುವ ಎಲ್ಲಾ ಉಪಕರಣಗಳು ಲಭ್ಯವಿರಬೇಕು.
- ಸಂಸ್ಥೆಯಲ್ಲಿ ಕನಿಷ್ಠ ಮೂರು ವರ್ಷಗಳ ಅನುಭವವಿರುವ ಇಬ್ಬರು ಪದವೀಧರ / ಇಂಜಿನಿಯರ್ ಹಾಗೂ ಮೂರು ಡಿಪ್ಲೊಮೋ ಇಂಜಿನಿಯರ್‌ಗಳು ಕಾರ್ಯ ನಿರ್ವಹಿಸುತ್ತಿರತಕ್ಕದ್ದು.
- ಸಂಸ್ಥೆಯ ಪ್ರಯೋಗಾಲಯದಲ್ಲಿ ಕಾಮಗಾರಿಗಳ ಸಾಮಗ್ರಿಗಳ ಗುಣಮಟ್ಟ ಪರೀಕ್ಷೆ ನಡೆಸಲು ಕನಿಷ್ಠ ಇಬ್ಬರು ಪ್ರಯೋಗಾಲಯದ ಸಹಾಯಕರುಗಳನ್ನು ಹೊಂದಿರತಕ್ಕದ್ದು.
- ಸಂಸ್ಥೆಯು ಒಂದು ಸಂಚಾರಿ ಪ್ರಯೋಗಾಲಯ ವಾಹನ ಹೊಂದಿರತಕ್ಕದ್ದು.
- ಸಂಸ್ಥೆಯಲ್ಲಿ ಕೊನೆಯ ಪಕ್ಷ ಇಬ್ಬರು ಗಣಕಯಂತ್ರದ ಜ್ಞಾನವಿರುವ ಅಥವಾ ಅನುಭವವಿರುವ ಡಾಟಾ ಎಂಟ್ರಿ ಆಪರೇಟರ್‌ಗಳು ಕಾರ್ಯ ನಿರ್ವಹಿಸುತ್ತಿರಬೇಕು.
- ಮೂರನೇ ಸಂಸ್ಥೆಯ ವಾರ್ಷಿಕ ಆದಾಯವು ಕೊನೆಯ ಪಕ್ಷ ಐದು ಲಕ್ಷಗಳ ವಹಿವಾಟು ನಡೆಸಿರಬೇಕು.
- ಮೂರನೇ ಸಂಸ್ಥೆಯು ಮೂರು ವರ್ಷಗಳು ನಿರಂತರವಾಗಿ ಕಾರ್ಯ ನಿರ್ವಹಿಸಿರಬೇಕು.
- ಮೂರನೇ ಸಂಸ್ಥೆಯ ವಹಿವಾಟಿನ ಲೆಕ್ಕಾಚಾರವನ್ನು ಆಡಿಟರ್‌ರವರಿಂದ ಕನಿಷ್ಠ ಮೂರು ವರ್ಷಗಳ ಲೆಕ್ಕ ಆಡಿಟ್ ಮಾಡಿಸಿರಬೇಕು.
- ಹೆಚ್ಚಿನ ಉಪಕರಣಗಳ ಅವಶ್ಯಕತೆ ಇದ್ದಲ್ಲಿ ಹೆಚ್ಚಿನ ಉಪಕರಣಗಳುಳ್ಳ ಸಂಸ್ಥೆ ವತಿಯಿಂದ ಒಪ್ಪಂದ ಮಾಡಿಕೊಳ್ಳಲು ಅವಕಾಶವಿರುತ್ತದೆ.
- ಕೇವಲ ಔಪಚಾರಿಕ ವರದಿ ನೀಡುವಂತಹ ಸಂಸ್ಥೆಯ ಮೇಲೆ ಕಪ್ಪುಪಟ್ಟಿಗೆ ಸೇರಿಸುವ ಕ್ರಮ ಸೇರಿದಂತೆ, ಇತರೆ ಕಾನೂನು ಕ್ರಮ ಜರುಗಿಸಲಾಗುವುದು.
- ಆಪಾದನೆಗಳು, ಪ್ರಗತಿಯಲ್ಲಿ ನಿರಾಶಾದಾಯಕ ದೂರು ಬಂದಿರುವಂತಹ ಹಾಗೂ ಗುಣಮಟ್ಟ ಕಾಪಾಡಲು ಆಸಕ್ತಿ ತೋರದ ಕಾಮಗಾರಿ ಗುತ್ತಿಗೆದಾರರೊಂದಿಗೆ ಹೊಂದಾಣಿಕೆ ಮಾಡಿಕೊಂಡಂತಹ ಸಂಸ್ಥೆಗಳನ್ನು ತಿರಸ್ಕರಿಸಲಾಗುವುದು.
- ಆಯ್ಕೆ ಮಾಡಿದ **3rd Party Consultants** ಸಂಸ್ಥೆಯನ್ನು ರಾಜ್ಯದ ಯಾವುದೇ ಜಿಲ್ಲೆ / ತಾಲ್ಲೂಕು ಕಾಮಗಾರಿಗಳ ಪರಿವೀಕ್ಷಣೆ, ತಪಾಸಣೆಗೆ ನಿಯೋಜಿಸಲಾಗುವುದು.
- **Fee** ಯನ್ನು ಆಯ್ಕೆಗೊಂಡ ಸಂಸ್ಥೆಗಳಿಂದ **Quatation** ಪಡೆದು ಸಂಸ್ಥೆಗಳೊಡನೆ ಸಮಾಲೋಚಿಸಿ ಹಾಗೂ **Reporting Format** ಗಳನ್ನು ಅಂತಿಮಗೊಳಿಸಲಾಗುವುದು.
- ಆಯ್ಕೆಯ ಅಂತಿಮ ನಿರ್ಧಾರ ಮುಖ್ಯ ಇಂಜಿನಿಯರ್‌ರವರ ಕಾರ್ಯ ವ್ಯಾಪ್ತಿಗೆ ಸೇರಿದೆ.

ತಮ್ಮ ವಿಶ್ವಾಸಿ,

ಮುಖ್ಯ ಇಂಜಿನಿಯರ್,

ಪಂ.ರಾ.ಇಂ.ಇಲಾಖೆ,ಬೆಂಗಳೂರು.